**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**. 227/2022

**PW**. 15

**CW**. 18

**ಸಾಕ್ಷಿಯ ಹೆಸರು – ಕೆ ಆರ್ ರತ್ನಾಂಭಿಕಾ**

**ಗಂಡನ ಹೆಸರು – ಮಹದೇವ**

**ವಯಸ್ಸು – 55 ವರ್ಷಗಳು** ದಿನಾಂಕ 24.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ಸಹಾಯಕ ಆಯುಕ್ತರು, ಕಂದಾಯ ಇಲಾಖೆ, ಎಂ.ಎಸ್. ಬಿಲ್ಡಿಂಗ್**

**ವಾಸಸ್ಥಳ – ಬೆಂಗಳೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಅಕ್ಟೋಬರ್ 2018 ರಿಂದ ಆಗಸ್ಟ್ 2021 ರ ವರೆಗೆ ಮೈಸೂರು ತಾಲೂಕು ಕಛೇರಿಯಲ್ಲಿ ಹೆಚ್ಚುವರಿ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04.03.2021 ರಂದು ಬೆಟ್ಟದಪುರ ಪೊಲೀಸರ ಕೋರಿಕೆ ಮೇರೆಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗಾಯಾಳು ರವಿಕುಮಾರ್ ಬಿನ್ ಲೇಟ್. ವೆಂಕಟೇಗೌಡ ಹಲ್ಲೆಗೊಳಗಾದ ಹಿನ್ನಲೆಯಲ್ಲಿ ಚಿಕಿತ್ಸೆಗೆ ಬೃಂದಾವನ ಆಸ್ಪತ್ರೆಗೆ ದಾಖಲಾಗಿದ್ದು, ಅದೇ ದಿನ ಮಧ್ಯಾಹ್ನ 12 ಗಂಟೆಗೆ ಬೃಂದಾವನ ಆಸ್ಪತ್ರೆಗೆ ಹೋಗಿ ಅಲ್ಲಿ ಐಸಿಯು ನಲ್ಲಿ ಚಿಕಿತ್ಸೆಪಡೆಯುತ್ತಿದ್ದ ಗಾಯಾಳು ರವಿಕುಮಾರ್ ಬಿನ್ ಲೇಟ್. ವೆಂಕಟೇಗೌಡ ನ ಹೇಳಿಕೆಯನ್ನು ವೈದ್ಯರ ಅನುಮತಿ ಮೇರೆಗೆ ಅವರ ಸಮಕ್ಷಮ ಅವರ ಹೇಳಿಕೆಯನ್ನು ದಾಖಲಿಸಿದ್ದೇನೆ. ವೈದ್ಯರು ಗಾಯಾಳು ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿದ್ದಾನೆ ಎಂದು ಹೇಳಿದರು. ನಾನು ಗಾಯಾಳುವನ್ನು ಮಾತನಾಡಿಸಿದಾಗ ಆತನು ಚೆನ್ನಾಗಿ ಮಾತನಾಡುತ್ತಾ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿದ್ದರು. ಗಾಯಾಳು ತನಗೆ ಗಾಯ ಆಗಿ ಪ್ರಜ್ಞೆ ಹೋಗಿದ್ದು, ಆಸ್ಪತ್ರೆಗೆ ದಾಖಲಾದ ನಂತರ ಪ್ರಜ್ಞೆ ಬಂತು ಎಂದು ಹೇಳುತ್ತಾರೆ.

**SC No.227/2022**
**PW. 22**

ದಿಃ 02.03.2020 ರಂದು ರಾತ್ರಿ 7 ಗಂಟೆ ಸಮಯದಲ್ಲಿ ನಾನು ಮದುವೆಯಾಗುವ ಹುಡುಗಿ ಅರುಣಿ ದೂರವಾಣಿ ಕರೆ ಮಾಡಿ ಬೆಟ್ಟದಪುರದ ಕೃಷಿ ಇಲಾಖೆ ಕಛೇರಿ ಬಳಿ ಕರೆದು ಗಿಫ್ಟ್ ಕೊಡುತ್ತೇನೆ ಎಂದು ಕರೆದಳು, ನಾನು ದ್ವಿಚಕ್ರ ವಾಹನದಲ್ಲಿ ಕೃಷಿ ಇಲಾಖೆಯ ಕಛೇರಿಯ ಬಳಿ ಹೋದಾಗ ಅರುಣಿ ನನ್ನನ್ನು ಕರೆದು ನನ್ನ ಕಣ್ಣಿಗೆ ಬಟ್ಟೆ ಕಟ್ಟಿ ಕಂಪೌಂಡ್ ಒಳಗೆ ಕರೆದುಕೊಂಡು ಹೋದಳು. ನಾನು ಅರುಣಿ ಗಿಫ್ಟ್ ಕೊಡುತ್ತಾಳೆಂದು ಕಾಯುತ್ತಿದ್ದಾಗ ಅರುಣಿಯು ನನಗೆ ಮೂರು ಸಲ ಚುಚ್ಚಿ ಗಾಯ ಮಾಡಿದಳು. ನನ್ನ ಕಣ್ಣಿನ ಬಟ್ಟೆಯನ್ನು ಬಿಚ್ಚಿ ನೋಡಲಾಗಿ ತರಕಾರಿಯನ್ನು ಕುಯ್ಯುವ ಚಾಕು ಅರುಣಿಯ ಕೈಯಲ್ಲಿ ಇತ್ತು ಎಂದು ಹೇಳುತ್ತಾನೆ. ಅರುಣಿ ಬಳಿ ಚಾಕು ಇರುವುದನ್ನು ನೋಡಿ ನನಗೆ ಭಯವಾಗಿ ನಾನು ಕಾಂಪೌಂಡ್ನಿಂದ ಬೈಕ್ ಬಳಿ ಓಡಿ ಬಂದೆ ಎಂದು ಹೇಳಿದನು. ಬೈಕ್ ಬಳಿ ಕೆಳಗೆ ಬಿದ್ದಾಗ ಹತ್ತಿರದಲ್ಲೇ ಇದ್ದ ಶ್ಯಾಮಲಾ ರವರು ಬಂದು ನೀರು ಕುಡಿಸಿದರು ಎಂದು ಹೇಳಿದನು. ನಂತರ ನಾನು ಆಸ್ಪತ್ರೆಯಲ್ಲಿದ್ದಾಗ ಪ್ರಜ್ಞೆ ಬಂತು ಎಂದು ತಿಳಿಸಿದನು. ಸದರಿ ಹೇಳಿಕೆಯನ್ನು ವೈದ್ಯರ ಸಮಕ್ಷಮ ನಿಗಧಿತ ನಮೂನೆಯಲ್ಲಿ ಪಡೆದಿರುತ್ತೇನೆ. ಸದರಿ ಹೇಳಿಕೆಗೆ ಸ್ಥಳದಲ್ಲಿದ್ದ ವೈದ್ಯರ ಮತ್ತು ಗಾಯಾಳುವಿನ ಸಹಿಗಳನ್ನು ಪಡೆದಿದ್ದೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ. 30 ಎಂದು, ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ. 30(ಎ) ಎಂದು, ಗಾಯಾಳುವಿನ ಸಹಿಯನ್ನು ನಿ.ಪಿ. 30(ಬಿ) ಎಂದು, ವೈದ್ಯರ ಸಹಿಯನ್ನು ನಿ.ಪಿ. 30(ಸಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್.ಪಿ ವಕೀಲರಿಂದಃ–**

ಪೋಲಿಸರಿಂದ ಬಂದ ಕೋರಿಕೆಯ ಬಗ್ಗೆ ನಮ್ಮ ಇಲಾಖೆಯ ಮೊಮೆಂಟ್ ರಿಜಿಸ್ಟರ್ ನಲ್ಲಿ ನಮೂದು ಮಾಡಿದ್ದೇನೆ. ಪೊಲೀಸರು ನೀಡಿದ ಮನವಿಯ ಜೊತೆಗೆ ಪ್ರಕರಣದ ಇತಿಹಾಸವನ್ನು ನಮೂದು ಮಾಡಿಲ್ಲ. ಗಾಯಾಳುವಿನ ಹೇಳಿಕೆಯನ್ನು ನನ್ನ ಸ್ವ ಅಕ್ಷರದಲ್ಲಿ ಬರೆದುಕೊಂಡಿದ್ದೇನೆ. ನಾನು ಹೇಳಿಕೆ ಪಡೆಯಲು ಗಾಯಾಳುವನ್ನು ಭೇಟಿ ಮಾಡಿದಾಗ ಆತನ ಸಹಾಯಕರು ಯಾರೂ ಇರಲಿಲ್ಲ. ಗಾಯಾಳುವಿನ ಹೇಳಿಕೆಯನ್ನು ಪಡೆಯಲು ನಾನು ಆಸ್ಪತ್ರೆಗೆ ಹೋದಾಗ ನಮ್ಮ ಇಲಾಖೆಯ ಸೀಲ್ ಅನ್ನು ತೆಗೆದುಕೊಂಡು ಹೋಗಿದ್ದೆ. ನಿ.ಪಿ. 30 ರ ಮೇಲೆ ಸಹಿ ಮಾಡಿರುವ

**SC No.227/2022**
**PW. 22**

ವೈದ್ಯರು ಸಹಿ ಕೆಳಗೆ ಸೀಲ್ ಹಾಕಿಲ್ಲ ಎಂದರೆ ಸರಿ. ಗಾಯಳು ನಿ.ಪಿ. 30 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ. 30 ಅನ್ನು ನಮ್ಮ ಕಛೇರಿಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 30 ಕ್ಕೆ ವೈದ್ಯರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.